157

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಪಿ. ಯೊಗೇಶ್ವರ್ ಇವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:**

ರಾಮನಗರ ಜಿಲ್ಲೆ ಚನ್ನಪಟ್ಟಣ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ 20.00 ಕೋಟಿ ರೂಗಳನ್ನು ನಗರಾಭಿವೃದ್ಧಿ ಇಲಾಖೆ ಯಡಿಯಲ್ಲಿ ಒದಗಿಸಲು ಆರ್ಥಿಕ ಇಲಾಖೆಯವರು ಅನುಮೋದಿಸಿ, ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಲಾಗಿತ್ತು. ಆದರೆ ಸದರಿ ಅನುದಾನವನ್ನು ತಡೆಯಿಡಿದಿರುವ ಬಗ್ಗೆ ಗಮನ ಸೆಳೆದಿರುವ ಕುರಿತು.

**ಉತ್ತರ:**

ಚನ್ನಪಟ್ಟಣ ನಗರಸಭೆಗೆ 2022-23ನೇ ಸಾಲಿಗೆ ಎಸ್.ಎಫ್.ಸಿ. ವಿಶೇಷ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ: ನಅಇ 03 ಎಸ್‌ಎಫ್‌ಸಿ 2023 ದಿನಾಂಕ:04.01.2023 ರಂತೆ ಮೊದಲನೇ ಹಂತದಲ್ಲಿ ರೂ.1000.00 ಲಕ್ಷಗಳು ಮತ್ತು ಸರ್ಕಾರದ ಪತ್ರ ಸಂಖ್ಯೆ:ನಅಇ 371 ಎಸ್‌ಎಫ್‌ಸಿ 2022 ದಿನಾಂಕ:27.02.2023 ರಂತೆ ಎರಡನೇ ಹಂತದಲ್ಲಿ ರೂ.1000.00 ಲಕ್ಷಗಳ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಈ ಸಂಬಂಧ ಕ್ರಿಯಾಯೋಜನೆ ತಯಾರಿಸಿ ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆ ರವರಿಂದ ಅನುಮೋದನೆಯನ್ನು ಪಡೆದು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಚುನಾವಣೆ ನೀತಿ ಸಂಹಿತೆ ಜಾರಿಯಾದ ಹಿನ್ನಲೆಯಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಾದ್ಯವಾಗಿರುವುದಿಲ್ಲ. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 1 ಟಿಎಸ್‌ಪಿ 2023 ದಿನಾಂಕ: 22.05.2023 ರಂತೆ ಇನ್ನೂ ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ತಡೆಹಿಡಿಯುವಂತೆ ಆದೇಶಿಸಿರುವುದರಿಂದ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸಾದ್ಯವಾಗಿರುವುದಿಲ್ಲ.

ಮುಂದುವರೆದು, ಚನ್ನಪಟ್ಟಣ ನಗರಸಭೆಗೆ ಎಸ್.ಎಫ್.ಸಿ. ವಿಶೇಷ ಅನುದಾನದಡಿ ಸರ್ಕಾರದಿಂದ ಮಂಜೂರಾತಿ ನೀಡಿರುವ ಒಟ್ಟಾರೆ ರೂ.20.00 ಕೋಟಿಗಳಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಕಾಮಗಾರಿಗಳಲ್ಲಿ ಪ್ರಾರಂಭವಾಗದಿರುವ ಕಾಮಗಾರಿಗಳ ಬಗ್ಗೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 01 ಟಿಎಫ್‌ಪಿ 2023 ದಿನಾಂಕ:31.07.2023 ರಲ್ಲಿ "ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳು ಕ್ರಮ ವಹಿಸಲು ತಿಳಿಸಿದೆ". ಆದ್ದರಿಂದ ಜಿಲ್ಲಾಧಿಕಾರಿಗಳಿಂದ ಕ್ರಿಯಾ ಯೋಜನೆ ಪಡೆದು ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು

ಸಂಖ್ಯೆ ನಅಇ 324 ಎಸ್‌ಎಫ್‌ಸಿ 2023.

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು

ರಹೀಂ ಖಾನ್
ಪೌರಾಡಳಿತ ಮತ್ತು ಹಜ್ ಸಚಿವರು

Scanned with OKEN Scanne